**OS. No. 51/2016** **DW – 2**

ಪ್ರಮಾಣೀಕರಿಸಲಾದ ದಿನಾಂಕಃ **30.07.2026**

<u>ಪಾಟೀ ಸವಾಲು ವಾದಿ ಪರ ಶ್ರೀ **CR** ವಕೀಲರಿಂದಃ</u>

1. ನಾನು 8 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ ಗಂಗಣ್ಣ, ನಾಗಣ್ಣ , ರಂಗಮ್ಮ, ಬಾಲಮ್ಮ ಸುಮಾರು ವರ್ಷಗಳಿಂದ ಪರಿಚಯವಿದೆ. ಅವರು ನಮ್ಮ ಸಂಬಂಧಿಕರಲ್ಲ ಒಂದೇ ಜನಾಂಗದವರು. ಅವರ ಮನೆ ಹಾಗೂ ನಮ್ಮ ಮನೆ ಅಕ್ಕ-ಪಕ್ಕ ಇರುವುದಿಲ್ಲ ಆದರೆ ಒಂದೇ ಬೀದಿಯಾಗಿರುತ್ತದೆ. ಈ ದಾವೆಯನ್ನು ಯಾರು ಯಾರ ವಿರುದ್ಧ ಏನು ಪರಿಹಾರ ಕೋರಿ ಹಾಕಿರುತ್ತಾರೆ ಎಂದು ಗೊತ್ತಿಲ್ಲ. ರಂಗಮ್ಮಜ್ಜಿ ವಿಲ್ ಮಾಡಲು ನನ್ನನ್ನು ಕರೆದಿದ್ದು ಆ ಸಂಬಂಧ ಸಾಕ್ಷಿ ಹೇಳಲು ಬಂದಿರುತ್ತೇನೆ. ವಿಲ್ ಆಗಿ 25-30 ವರ್ಷ ಆಗಿರುತ್ತದೆ ಯಾವ ನಿರ್ದಿಷ್ಟ ದಿನಾಂಕ ಎಂದು ನೆನಪಿಲ್ಲ. ಆ ಸಮಯದಲ್ಲಿ ರಂಗಮ್ಮನವರಿಗೆ 85-90 ವರ್ಷ ವಯಸ್ಸು ಆಗಿರಬಹುದು. ಅವರು ವಿದ್ಯಾಭ್ಯಾಸ ಮಾಡಿರಲಿಲ್ಲ. ನನ್ನ ಜೊತೆ ನರಸಿಂಹಯ್ಯ, ಲಕ್ಷ್ಮಯ್ಯ ಎನ್ನುವವರನ್ನು ಕರೆಯಲಾಗಿತ್ತು. ಅವರು ಬೇರೆ ಬೇರೆ ಬೀದಿಯಲ್ಲಿ ವಾಸವಿರುವವರಾಗಿರುತ್ತಾರೆ. ಅವರನ್ನು ರಂಗಮ್ಮಜ್ಜಿಯೇ ಕರೆದಿತ್ತು. ಆ ಸಮಯದಲ್ಲಿ ರಂಗಮ್ಮಜ್ಜಿ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಅವರಿಗೆ ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲ, ಕಿವಿ ಕೇಳಿಸುತ್ತಿರಲ್ಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಯಾವುದು ಸರಿ ಯಾವುದು ತಪ್ಪು ಎಂದು ನಿರ್ಧರಿಸುವ ದೈಹಿಕ ಹಾಗೂ ಮಾನಸೀಕ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ರಂಗಮ್ಮ ಸಿದ್ದಪ್ಪನನ್ನು ಸಾಕಿಕೊಂಡು ಅವರ ಜೊತೆಯಲ್ಲಿಯೇ ವಾಸವಿದ್ದರು. ಅವರ ಜೊತೆಯಲ್ಲಿ ಅವರು ಕುಟುಂಬಸ್ಥರು ವಿಲ್ ಮಾಡುವ ಸಮಯದಲ್ಲಿ ಇರಲಿಲ್ಲ.
2. ವಿಲ್ ಅನ್ನು ಈಗಿನ ಪೊಲೀಸ್ ಠಾಣೆಯ ಪಕ್ಕದಲ್ಲಿ ಇರುವ ಹಳೆಯ ತಾಲ್ಲೂಕು ಕಚೇರಿಯ ಹತ್ತಿರ ಇರುವ ರಾಮಶೆಟ್ಟರು ಎನ್ನುವವರ ಬಳಿ ಬರೆಸಲಾಯಿತು. ಮೊದಲು ಪತ್ರವನ್ನು ಬರೆಸಲಾಯಿತು, ಒಂದು ವಾರದ ನಂತರ ಅದನ್ನು ರಿಜಿಸ್ಟರ್ ಮಾಡಿಸಲಾಯಿತು. ಎರಡೂ ದಿನ ನಾವೆಲ್ಲರೂ ಇದ್ದೆವು. ಆ ಸಮಯದಲ್ಲಿ ರಂಗಮ್ಮಜ್ಜಿ ಹಳೆ ಅಸ್ಸೆಸ್ಮೆಂಟ್ ದಾಖಲೆಗಳನ್ನು ತಂದಿತ್ತು. ಸಿದ್ದಪ್ಪ ನಾಗರಾಜುರವರು ಸುಮಾರು ವರ್ಷಗಳಿಂದ ಪರಿಚಯ. ವಾದಿ ತಮ್ಮಯ್ಯ ಕೆ.ಇ.ಬಿಯಲ್ಲಿ ಕೆಲಸ ಮಾಡುತ್ತಿದ್ದು ತಿಂಗಳಿಗೊಮ್ಮೆ ಬಂದು ಹೋಗುತ್ತಿದ್ದರು. ರಂಗಮ್ಮ ವಿಲ್

ಅನ್ನು ಭದ್ರಾವತಿ ಗಂಗಣ್ಣನ ಮಗ ಸಿದ್ದಪ್ಪನಿಗೆ ಸೇರಬೇಕು ಎಂದು ಬರೆಸಿರುತ್ತಾರೆ. ಸದರಿ ವಿಲ್ ಎಷ್ಟು ಹಾಳೆ ಇತ್ತು ಎಂದು ನೆನಪಿಲ್ಲ 3 ಹಾಳೆ ಇದ್ದಿರಬಹುದು ಕೊನೆಯ ಪುಟದಲ್ಲಿ ಸಹಿ ಮಾಡಿರುತ್ತೇನೆ. ನರಸಿಂಹಯ್ಯ ಎನ್ನುವವರು ಮೊದಲು ಸಹಿ ಮಾಡಿರುತ್ತಾರೆ ನಂತರ ಲಕ್ಷ್ಮಯ್ಯ ಎನ್ನುವವರು ಸಹಿ ಮಾಡಿರುತ್ತಾರೆ. ಸದರಿ ವಿಲ್ ಪತ್ರ ವನ್ನು ರಂಗಮ್ಮಜ್ಜಿಯೇ ಇಟ್ಟುಕೊಂಡಿದ್ದರು ಈ ವಿಚಾರವನ್ನು ರಂಗಮ್ಮ ಜೀವಿತಾವಧಿಯಲ್ಲಾಗಲೀ ಅಥವಾ ಅವರು ಮೃತಪಟ್ಟ ನಂತರವಾಗಲೀ ನಾನು ಸಿದ್ದಪ್ಪರವರಿಗೆ ತಿಳಿಸಿರುವುದಿಲ್ಲ. ರಂಗಮ್ಮ ಆ ಸಮಯದಲ್ಲಿ ಮಾನಸೀಕವಾಗಿ ಸದೃಢರಾಗಿರಲಿಲ್ಲ ನಾನು ಸಿದ್ದಪ್ಪ ಹಾಗೂ ಇತರೆ ಸಾಕ್ಷಿದಾರರು ಸೇರಿಸಿಕೊಂಡು ವಿಲ್ ಅನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ರಂಗಮ್ಮಜ್ಜಿ ನಮ್ಮನ್ನು ಕರೆದಿರಲಿಲ್ಲ ವಿಲ್ ಅನ್ನು ಅವರು ಮುಕ್ತ ಮನಸ್ಸಿನಿಂದಲೂ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪ ಹಾಗೂ ಅವರ ಮಕ್ಕಳಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ